# ಬತ್ತಿದ ಕೆರೆಯ ಅಂಗಳದಲ್ಲೀಗ ನೀರನಗು



ಊರ ದಾಹ ತಣಿಸಬೇಕಾದ ಕೆರೆಗಳು ಕಸ–ತ್ಯಾಜ್ಯಗಳ, ಮುಳ್ಳುಕಂಟಿಗಳ ತಿಪ್ಪೆಯಾಗಿ ರೂಪುಗೊಂಡಿರುವ ನೂರಾರು ಉದಾಹರಣೆಗಳು ರಾಜ್ಯದಲ್ಲಿವೆ. ಬಳ್ಳಾರಿ ಜಿಲ್ಲೆಯ ಉಜ್ಜಯಿನಿಯ ಕೆರೆಯೂ ಹೀಗೆ ರೂಪಾಂತರಗೊಂಡು ಬರಿದಾಗಿತ್ತು. ಕೊರೊನಾ ಲಾಕ್‌ಡೌನ್ ಸಮಯದಲ್ಲಿ ನಗರಗಳಿಂದ ಊರಿಗೆ ಬಂದ ಯುವಜನರ ಕಣ್ಣು ಕೆರೆಯ ಮೇಲೆ ಬಿದ್ದಿದ್ದೇ ಈಗ ಅದರ ಚಹರೆಯೇ ಬದಲಾಗಿದೆ. ಕೆರೆಯಂಗಳದಲ್ಲೀಗ ನೀರನಗು.

■ ರಾಘವೇಂದ್ರ ಕೆ. ತೊಗರ್ಸಿ

ಐದು ನೂರು ವರ್ಷಗಳ ಇತಿಹಾಸದ ಕೆರೆ ಬಳಲಿ ಬಾಯಿ ಬಿರಿದಿತ್ತು. ಮಳೆ ಎಷ್ಟೇ ಸುರಿದರೂ ಆ ಕೆರೆಯ ಒಡಲಲ್ಲಿ ಬೊಗಸೆ ನೀರಿನ ಪಸೆಯೂ ಇರಲಿಲ್ಲ. ಸುಮಾರು 340 ಎಕರೆ ವಿಸ್ತೀರ್ಣದ ಆ ಬೃಹತ್ ಕೆರೆಯಂಗಳ ವರ್ಷವೆಲ್ಲ ಬಾಯಾರಿ ಬತ್ತಿದೆದೆಯ ಬಯಲಾಗಿ ಕಾಣಿಸುತ್ತಿತ್ತು. ಏಕೆ ಹೀಗಾಯ್ತು? ಊರಿನವರಿಗೆ ಯೋಚಿಸಲು ಬಿಡುವು ಸಿಕ್ಕಿದ್ದು ಕೊರೊನಾ ಅವಧಿಯ ಲಾಕ್‌ಡೌನ್.

ಕೆರೆಯಲ್ಲಿ ಜಾಲಿ ಮುಳ್ಳಿನ ಗಿಡ ಮತ್ತು ಕುರುಚಲು ಪೊದೆ ಬೆಳೆದಿದ್ದರಿಂದ ನೀರಿಗೆ ಅಲ್ಲಿನ್ನೇನು ಕೆಲಸ. ಗಂಗೆ ಅಲ್ಲೆಲ್ಲಿಯೂ ನಿಲ್ಲದೆ ಸೋರಗಿ ಹೋಗುತ್ತಿದ್ದಳು. ಆಕೆಯನ್ನು ಹೇಗಾದರೂ ಮಾಡಿ ಅಲ್ಲಿ ಹಿಡಿದು ನಿಲ್ಲಿಸುವ ಕಾಯಕಲ್ಪ ರೂಪಿತವಾಗಿದ್ದು ಎರಡನೇ ಅವಧಿಯಲ್ಲಿ ಲಾಕ್‌ಡೌನ್ ಜಾರಿಯಾದ ನಂತರ. ನೀರು ಹಿಡಿದಿಡುವ ಸಂಕಲ್ಪ ಧರಿಸಿ ಒಂಬತ್ತೇ ದಿನಗಳಲ್ಲಿ ನೀರು ಬಂಧಿಯಾಗಿದ್ದನ್ನು ಕಂಡು ಹರ್ಷೋಲ್ಲಾಸ ಮೊಳಗಿದ ಕಥೆ ಇಲ್ಲಿದೆ.



ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಉಜ್ಜಯಿನಿಯಲ್ಲಿ (ಉಜ್ಜೈನಿ, ಉಜ್ಜಿನಿ), ವೀರಶೈವ ಪಂಚಪೀಠಗಳಲ್ಲಿ ಒಂದು ಅಲ್ಲಿದೆ. ಆ ಕಾರಣಕ್ಕಾಗಿ ಚಾರಿತ್ರಿಕ ಮಹತ್ವ ಇರುವ ಆ ಊರಿನಲ್ಲಿ ಚಾಲುಕ್ಯರ ಹೆಜ್ಜೆಗುರುತುಗಳೂ ಇವೆ. ಅಷ್ಟು ದೀರ್ಘ ಇತಿಹಾಸದ ಊರಿಗೆ ಇದ್ದಿದ್ದು ಒಂದೇ ಕೆರೆ. ಅದು ಕಳೆದ ಹದಿನೈದು ವರ್ಷಗಳಿಂದ ನೀರಿಗಾಗಿ ಬಾಯಿ ತೆರೆದು ಕೊರಗುತ್ತಿತ್ತು. ಸಾರ್ವಜನಿಕ ಕೆರೆಯ ಏರಿ–ಕೋಡಿ ಸುಸ್ಥಿತಿಯಲ್ಲಿವೆ. ಒಳಹರಿವಿನ ಮೂಲವೂ ಚೆನ್ನಾಗಿದೆ. ಆದರೂ ನೀರು ನಿಲ್ಲುತ್ತಿಲ್ಲ. ಏಕೆಂದರೆ ಕೆರೆಯ ತುಂಬ ಜಾಲಿ ಜಾತಿಯ ಮುಳ್ಳುಗಿಡಗಳು ಬೆಳೆದು ನಿಂತಿವೆ. ವಿಸ್ತಾರವಾದ ಕೆರೆ ನಿರ್ವಹಣೆಯ ಕೊರತೆಯಿಂದ ಹಾಳಾಗಿತ್ತು. ಮುಳ್ಳುಕಂಟಿಗಳ ಪೊದೆ ಮನುಷ್ಯನೊಬ್ಬ ನುಸುಳದಷ್ಟು ದಟ್ಟವಾಗಿ ಬೆಳೆದಿತ್ತು. ಆ ಕೆರೆಯ ಆವರಣದ ಅಲ್ಲಲ್ಲಿ ‘ನರೇಗಾ’ ಕೆಲಸ ಕಲ್ಪಿಸಲಾಗಿತ್ತು. ಅದೂ ಕೆರೆಯ ಪಾಲಿಗೆ ಕಂಟಕವಾಗಿಯೇ ಕಾಡಿದೆ. ನರೇಗಾ ಕಾರ್ಮಿಕರು ಮಣ್ಣನ್ನು ಬಗೆದು ಮತ್ತೊಂದು ಕಡೆ ಹಾಕಿದರು. ಮತ್ತೊಂದು ಜಾಗದಲ್ಲಿ ತೆಗೆದು ಇನ್ನೊಂದು ಜಾಗದಲ್ಲಿ ಹಾಕುತ್ತಿದ್ದರು. ಇದು ಕೆರೆಯ ಆರೋಗ್ಯ ಮತ್ತು ಅಂದವನ್ನು ಮತ್ತಷ್ಟು ಹದಗೆಡಿಸಿತು. ಫಲವತ್ತಾದ ಆ ಮಣ್ಣನ್ನು ಯಾರೂ ಹೊಲ ಗದ್ದೆಗಳಿಗೂ ಬಳಸಲಿಲ್ಲ. ಕೊನೆಯಪಕ್ಷ ಆ ಮಣ್ಣನ್ನು ಕೆರೆಯಿಂದ ಹೊರಗೂ ಹಾಕಲಿಲ್ಲ. ಅದೇ ಕೆಲಸವನ್ನು ಉಜ್ಜಯಿನಿಯೂ ಸೇರಿದಂತೆ ಸುತ್ತಮುತ್ತಲಿನ ನಾಲ್ಕು ಗ್ರಾಮಪಂಚಾಯಿತಿಗಳೂ ಮಾಡಿದವು. ಉದ್ಯೋಗ ಖಾತ್ರಿ ಯೋಜನೆಯಡಿ ಕಾರ್ಮಿಕರಿಗೆ ಬೇರೆಲ್ಲೂ ಕೆಲಸ ಕೊಡಲು ಸಾಧ್ಯ ಇಲ್ಲ ಅನ್ನಿಸಿದಾಗಲೆಲ್ಲ, ಕೆರೆಯ ಅಂಗಳ ತೋರಿಸುತ್ತಿದ್ದರು. ಕಾರ್ಮಿಕರು ಮಣ್ಣು ಬಗೆದು ಅತ್ತಿತ್ತ ಚೆಲ್ಲಿ ಹೋಗುತ್ತಿದ್ದರು.

ಕೆರೆಯ ಗತ ವೈಭವವನ್ನು ಮರುಜೀವಗೊಳಿಸುವ ಕಾಯಕಲ್ಪಕ್ಕೆ ಅಂತೂ ಕಾಲ ಕೂಡಿಬಂತು. ರಾಜ್ಯದಲ್ಲಿ ಎರಡನೇ ಬಾರಿಗೆ ಲಾಕ್‌ಡೌನ್ ಜಾರಿಯಾಗುವ ಸಂದರ್ಭ. ಊರು ಬಿಟ್ಟಿದ್ದ ಕೆಲ ನೌಕರರು, ಉದ್ಯೋಗಸ್ಥರು ಊರಿಗೆ ಬಂದಿದ್ದರು.